# ವಾರ್ತಾ ವಿಶ್ಲೇಷಣೆ

# ಮನನೊಂದ ಮಾತೆಯರು

Why suffer in silence? - ಏಕೆ ತಾನೇ ಏಕಾಂತದಲ್ಲಿ ಸಂಕಟಪಡಬೇಕು? — 'ಹಿಂದೂ' ದಿನಪತ್ರಿಕೆಯ ೨೦೦೯, ಆಗಸ್ಟ್ ೨ ರ ಭಾನುವಾರದ ಪುರವಣಿಯ ತಲೆಬರಹ ಇದು.

ಭಾರತೀಯರಾದ ನಾವು ನಮ್ಮ ಕುಟುಂಬವ್ಯವಸ್ಥೆಯ ಬಗ್ಗೆ ಹೆಮ್ಮೆಪಟ್ಟುಕೊಳ್ಳುತ್ತೇವೆ; ಕೌಟುಂಬಿಕ ಮೌಲ್ಯಗಳ ಬಗ್ಗೆ ಅಭಿಮಾನ ಪಡುತ್ತೇವೆ. ಆದರೆ ನಮ್ಮ ಕುಟುಂಬವ್ಯವಸ್ಥೆಯ ಕರಾಳಮುಖ ವೊಂದನ್ನು ಬಹಳ ಜಾಣತನದಿಂದ ಬಚ್ಚಿಡುತ್ತೇವೆ. ಅದೇ ಕುಟುಂಬದಲ್ಲಿ ಸ್ತ್ರೀಯರ ಮೇಲೆ ಅವಿರತವಾಗಿ ಇಂದಿಗೂ ನಡೆಯುತ್ತಿರುವ **ದೈಹಿಕ, ಮಾನಸಿಕ** ಮತ್ತು **ಆರ್ಥಿಕ** ದೌರ್ಜನ್ಯ.

ಈ ಬಗೆಯ ದೌರ್ಜನ್ಯ ಬಡ, ಗ್ರಾಮೀಣ ಅಥವಾ ನಿರಕ್ಷರಸ್ಥ ಮಹಿಳೆಯರಿಗೆ ಮಾತ್ರ ಸೀಮಿತವಾಗಿಲ್ಲ. ನಗರಗಳಲ್ಲಿರುವ ಸುಶಿಕ್ಷಿತ, ಉದ್ಯೋಗಸ್ಥ ಮಹಿಳೆಯರ ಮೇಲೂ ಹಿಂಸೆಯ ತಾಂಡವ ಅನವರತವಾಗಿ ನಡೆಯುತ್ತಲೇ ಇದೆ. ಇದರಿಂದ ಪಾರಾಗಲು ಇತ್ತೀಚಿನವರೆಗೂ ಪ್ರಭಾವಶಾಲಿ ಕಾನೂನಿನ ಆವಶ್ಯಕತೆ ಇತ್ತು. ೨೦೦೫ ನೆಯ ಇಸವಿಯಲ್ಲಿ ಭಾರತ ಸರ್ಕಾರವು Protection of Women from Domestic violence (PWDVA) - ಗೃಹಹಿಂಸೆಯಿಂದ ಮಹಿಳೆಯರನ್ನು ಕಾಪಾಡುವ ಕಾನೂನನ್ನು ಜಾರಿಗೆ ತಂದಿದೆ. ಈ ಕಾನೂನಿನ ಅಡಿಯಲ್ಲಿ ಹಿಂಸೆಯ ವ್ಯಾಖ್ಯಾನದ ಪರಿಧಿಯನ್ನು ಮಾನಸಿಕ ಮತ್ತು ಆರ್ಥಿಕ ದೌರ್ಜನ್ಯಗಳಿಗೂ ವಿಸ್ತರಿಸಲಾಗಿದೆ. ಹಾಗೂ ದೌರ್ಜನ್ಯಕ್ಕೆ ಒಳಗಾದ ಮಹಿಳೆಯು ಒಳಗಾಗುವ ಎಲ್ಲ ಬಗೆಯ ಕಷ್ಟ-ಸಂಕಷ್ಟ ಗಳನ್ನೂ ಪರಿಗಣನೆಗೆ ತಂದುಕೊಳ್ಳಲಾಗಿದೆ. ಅಸಹಾಯಕ ಮತ್ತು ನಿರ್ಗತಿಕ ಮಹಿಳೆಯರಿಗೆ ವರದಾನವಾಗಿ ಈ ಕಾನೂನು ಪರಿಣಮಿಸಿದೆಯೆಂದು ನಂಬಲಾಗಿದೆ.

ಈ ಕಾನೂನಿನ ಪ್ರಕಾರ, ನ್ಯಾಯಾಲಯದಲ್ಲಿ ದಾವೆ ಹೂಡಿದ ಒಡನೆಯೇ ಸಂತ್ರಸ್ತ ಮಹಿಳೆಗೆ ಸುರಕ್ಷಿತ ನಿವಾಸಸ್ಥಾನವನ್ನು ಮತ್ತು ಸೂಕ್ತ ಭದ್ರತೆಯನ್ನು ಒದಗಿಸಿ ಕೊಡಲಾಗುವುದು. ಆದರೂ ನ್ಯಾಯಾಲಯಗಳಲ್ಲಿ ವ್ಯಾಜ್ಯವು ಬಹುಕಾಲದವರೆಗೆ ನಡೆಯುವ ಸಂಭವವೇ ಹೆಚ್ಚು. ಹೀಗಾಗಿ ಆ ಮಹಿಳೆ ಯಾಚಿಸುವ ವಿವಾಹ ವಿಚ್ಛೇದನ ಮತ್ತು ಆರ್ಥಿಕ ಪರಿಹಾರಗಳು ಬಹಳ ಕಾಲದ ಅನಿಶ್ಚಿತತೆಯ ನಂತರವೇ ಸಿಕ್ಕುತ್ತವೆ. ಹೀಗಾಗಿ ಅಲ್ಲಿಯವರೆಗೆ, ಆ ಮಹಿಳೆಯ ಮತ್ತು ಅವಳನ್ನು ಆಶ್ರಯಿಸಿದ ಮಕ್ಕಳ ಗತಿ ಡೋಲಾಯ ಮಾನವಾಗಿಯೇ ಇರುತ್ತದೆ.

ಈ ಕಾನೂನಿನ ಪ್ರಕಾರ, ರಾಜ್ಯಸರ್ಕಾರಗಳು ವಿಶೇಷ ರಕ್ಷಣಾ ಅಧಿಕಾರಿಗಳನ್ನು ನೇಮಿಸಬೇಕಾಗುತ್ತದೆ. ಅವರು ವ್ಯಾಜ್ಯ ಹೂಡಿದ ಮಹಿಳೆಗೆ ಆತನ ಪತಿಯಿಂದ ರಕ್ಷಣೆಯನ್ನು ಖಾತರಿ ಪಡಿಸಿಕೊಳ್ಳಬೇಕಾಗುತ್ತದೆ. ಆದರೆ 'ಹಿಂದೂ' ಪತ್ರಿಕೆಯಲ್ಲಿ ಬಂದ ವರದಿಯ ಪ್ರಕಾರ, ಆಂಧ್ರಪ್ರದೇಶವನ್ನು ಬಿಟ್ಟು ಬೇರೆ ಯಾವ ರಾಜ್ಯವೂ ಈ ಬಗ್ಗೆ ತಲೆಕೆಡಿಸಿಕೊಂಡಿಲ್ಲ; ಮಹಿಳೆಯರ ವ್ಯಾಜ್ಯಗಳ ಶೀಘ್ರ ವಿಲೇವಾರಿಗೆ ಬೇಕಾದ ವ್ಯವಸ್ಥೆಯನ್ನು ಸಮರ್ಪಕ ವಾಗಿ ಜಾರಿಗೆ ತಂದಿಲ್ಲ. ಇದರಿಂದ ಸಂತ್ರಸ್ತ ಮಹಿಳೆಯರ ಜೀವನ ತ್ರಿಶಂಕು ಸ್ಥಿತಿಯಾಗಿದೆ; ಅವರ ಮಾನಸಿಕ ಮತ್ತು ಭಾವನಾತ್ಮಕ ಪರಿಸ್ಥಿತಿಗಳು ಚಿಂತಾಜನಕವಾಗಿವೆ.

ಉದಾಹರಣೆಗೆ ಬೆಂಗಳೂರಿನ ಸಾಫ್ಟ್‌ವೇರ್ ಇಂಜಿನೀರ್ ಆದ ಒಬ್ಬ ಮಹಿಳೆ ತನ್ನ ಪತಿಯಿಂದ ದೌರ್ಜನ್ಯವನ್ನು ಅನುಭವಿಸಿದರು. ಕುಟುಂಬ ನ್ಯಾಯಾಲಯದ ಮುಂದೆ ಅಕ್ಟೋಬರ್ ೨೦೦೭ ರಂದು ದಾವೆಯನ್ನು ಹೂಡಿರುವ ಆಕೆ ಮತ್ತು ಆಕೆಯ ತಂದೆ ಇದುವರೆಗೂ ೮೩ ಬಾರಿ ವ್ಯಾಜ್ಯದ ಇತ್ಯರ್ಥಕ್ಕಾಗಿ ನ್ಯಾಯಾಲಯಕ್ಕೆ ಅಲೆದಿದ್ದಾರೆ. ದೆಹಲಿಯ ಮಹಿಳಾ ನ್ಯಾಯಾಲಯಕ್ಕೆ ಕಳೆದ ಎರಡು ವರ್ಷಗಳಿಂದ ಬಂದುಹೋಗುತ್ತಿರುವ ೨೬ ವರ್ಷದ ಪರಿಮಳ ಹೇಳುತ್ತಾರೆ, "ಕಾನೂನು, ಉತ್ತಮ ನ್ಯಾಯವಾದಿಯನ್ನು ಇಟ್ಟುಕೊಳ್ಳುವ ಶಕ್ತಿಯಿರುವ ಶ್ರೀಮಂತರ ಪರವಾಗಿ ಮಾತ್ರವೇ ಇದೆ. ಏಕೆಂದರೆ ಅಂತಹ ನ್ಯಾಯವಾದಿಗಳು ಮಾತ್ರ ಬಹುಬೇಗ ವ್ಯಾಜ್ಯವನ್ನು ವಿಲೇವಾರಿ ಮಾಡಿಸಿಕೊಡಬಲ್ಲರು."

ನಾರಿಯರನ್ನು ಮಾತೆಯರೆಂದು ಪೂಜ್ಯಭಾವನೆಯಿಂದ ಕಂಡದ್ದಲ್ಲದೆ, ದೇವಿಯರೆಂದು ಆರಾಧಿಸಿದ ನಾಡು ನಮ್ಮದು. ಆದರೆ ಮಹಿಳಾದೌರ್ಜನ್ಯದ ಬಗ್ಗೆ ನಾವು ತೋರಿಸುತ್ತಿರುವ ನಿರ್ಲಜ್ಜ ನಿರ್ಲಕ್ಷ್ಯತನ ಅಕ್ಷಮ್ಯವಾದುದು.

ಒಟ್ಟಾರೆ ನಮ್ಮ ಸಮಾಜದ ಸಂಪೂರ್ಣ ನೈತಿಕ ಅವನತಿಯನ್ನು ಇದು ಎತ್ತಿ ತೋರಿಸುತ್ತದೆ. ನಿಜ ಹೇಳಬೇಕೆಂದರೆ ಯಾವ ಕಾನೂನೂ ಕೂಡ ಸಮಾಜದಲ್ಲಿ ನೈತಿಕತೆಯನ್ನು ಬಿತ್ತಲಾರದು. ಯಾವಾಗ ಸಮಾಜದಲ್ಲಿ ಕೊಳ್ಳುಬಾಕ ಪ್ರವೃತ್ತಿ ಬೆಳೆದು ಲೋಭ ಪ್ರವೃತ್ತಿ ಹೆಚ್ಚಾಗುವುದೋ ಆಗ ಮಾನವೀಯ ಮೌಲ್ಯಗಳು ಕುಸಿಯತೊಡಗುತ್ತವೆ. ಧಾರ್ಮಿಕ ಶ್ರದ್ಧೆ ಮತ್ತು ಆಚರಣೆಗಳು ಕೂಡ ಭ್ರಷ್ಟಾಚಾರದ ಹಾದಿ ಹಿಡಿಯುತ್ತವೆ. ನೈತಿಕ ಸಂವೇದನೆ ಇಲ್ಲದ ಧರ್ಮ ತನ್ನ ಸತ್ವವನ್ನೇ ಕಳೆದುಕೊಳ್ಳುತ್ತದೆ; ಕೆಡುಕರ ಕೈಯಲ್ಲಿ ಬೂಟಾಟಿಕೆಯ ಸಾಧನವಾಗುತ್ತದೆ. ಅಂತಹ ಧರ್ಮದಿಂದ ಏನು ತಾನೇ ಪ್ರಯೋಜನ?

ನೈತಿಕ ಮತ್ತು ಮಾನವೀಯ ಪ್ರಜ್ಞೆಯುಳ್ಳ ಜನರು ಮಾತ್ರವೇ ಶೋಷಣೆರಹಿತ ಸಮಾಜವನ್ನು ನಿರ್ಮಿಸಬಲ್ಲರು. ಅಂತಹವರು ಮಾತ್ರವೇ ನೈಜ ಧರ್ಮ ಅಥವಾ ಅಧ್ಯಾತ್ಮದ ಹರಿಕಾರರಾಗಬಲ್ಲರು. ಅವರು ಮಾತ್ರವೇ ದೇವೀಸಮಾನರಾದ ನಮ್ಮ ಮಾತೆಯರ, ಸಹೋದರಿಯರ ದುಃಖದುಮ್ಮಾನಗಳ ಕಣ್ಣೀರನ್ನು ಒರೆಸಬಲ್ಲರು.